# ಡಾ. ಎಚ್. ಗಿರಿಜಮ್ಮ



ಹುಟ್ಟಿದ್ದು ದಾವಣಗೆರೆ. ಪಿಯುಸಿವರೆಗೆ ಓದಿದ್ದು ಅಲ್ಲಿಯೇ. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣ. ಯಶಸ್ವಿ ವೈದ್ಯಳಾಗಬೇಕು ಎನ್ನುವ ಅವರ ತಾಯಿಯ ಆಸೆ ಅವರನ್ನು ವೈದ್ಯಕೀಯ ಅಧ್ಯಯನದಲ್ಲಿ ತೊಡಗಿಕೊಳ್ಳುವಂತೆ ಮಾಡಿತು. ಚಿಕ್ಕ ವಯಸ್ಸಿನಲ್ಲಿ ಕಾದಂಬರಿಗಾರ್ತಿ ತ್ರಿವೇಣಿ ಬರಹದಿಂದ ಪ್ರಭಾವಿತರಾದರು. ಅವರ ಮೊದಲ ಕತೆ 'ಹೂಬಳ್ಳಿಗೆ ಈ ಆಸರೆ' 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಯಿತು. ಮುಂದೆ 1976ರಲ್ಲಿ 'ಹೂಬನ' ಕಾದಂಬರಿ 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. 'ಚಂದಮಾಮ', 'ತಮಸೋಮ ಜ್ಯೋತಿರ್ಗಮಯ', 'ಅಂಬರತಾರೆ' ಸೇರಿದಂತೆ ಒಟ್ಟು 27 ಕಾದಂಬರಿಗಳು ಪ್ರಕಟವಾಗಿವೆ. 'ಅರ್ಧಾಂಗಿ', 'ಸಂಜೆಮಲ್ಲಿಗೆ', 'ಅನಾವರಣ' ಸೇರಿದಂತೆ ಅನೇಕ ನೀಳ್ಗತೆಗಳು 'ಮಯೂರ'ದಲ್ಲಿ ಪ್ರಕಟವಾಗಿವೆ. ಒಟ್ಟು 50 ಕತೆಗಳನ್ನು ಬರೆದಿದ್ದಾರೆ. ಐದು ಕಥಾಸಂಗ್ರಹಗಳು ಪ್ರಕಟವಾಗಿವೆ. ಪ್ರಸ್ತುತ ದಾವಣಗೆರೆಯಲ್ಲಿ ನೆಲೆಸಿದ್ದಾರೆ.

ಮಧ್ಯೆ ತಡೆದು ಕ್ಷಮೆ ಕೇಳುವವಳಂತೆ ಹೇಳಿದಳು.

"ತಪ್ಪೇನಿದೆ ಡಾಕ್ಟ್ರೆ? ಆಸ್ಪತ್ರೆಗೆ ಬಂದ ಮೇಲೆ ರೋಗಿನೇ ತಾನೆ? ನಿಮ್ಮಷ್ಟು ತಾಳ್ಮೆಯಿಂದ ಯಾರು ಹೇಳ್ತಾರೆ?" ಎಂದ ಅವನು ವಿಷಾದದಿಂದ.

"ನೀವು ನಿರಾಶರಾಗಬೇಕಾದುದಿಲ್ಲ. ನಿಮ್ಮ ಹೆಂಡತಿ ರೋಗಿಯೂ ಅಲ್ಲ. ಕೆಲವು ಕ್ಷಣಗಳ ಚಿತ್ತ ಚಾಂಚಲ್ಯ ಅಷ್ಟೇ. ಖಂಡಿತಾ ಸರಿಯಾಗ್ತಾರೆ. ಹುಚ್ಚು ಹಿಡಿದವರಲ್ಲ ತಿಳಿಯಿತಾ? ಆ, ನಾನ್ ಏನ್ ಹೇಳ್ತಾಯಿದ್ದೇಂದ್ರೆ, ಅದೆ, ರೋಗಿಯನ್ನು ಸುಪ್ತ ಮನಸ್ಸಿನ ಪ್ರಪಂಚಕ್ಕೆ ಇಂಜೆಕ್ಷನ್ ಕೊಟ್ಟು ನಿಧಾನವಾಗಿ ಕರೆದೊಯ್ಯುತ್ತೇವೆ... ಹಂತ... ಹಂತವಾಗಿ ಔಷಧಿ ರಕ್ತನಾಳಗಳಲ್ಲಿ ಹೋಗುತ್ತಿದ್ದಂತೆಯೇ ಅವಳ ಸುಪ್ತ ಮನಸ್ಸು ಜಾಗ್ರತವಾಗುತ್ತದೆ... ನಾವು ಕೇಳುತ್ತಾ ಹೋದ ಪ್ರಶ್ನೆಗಳಿಗೆಲ್ಲಾ ಯಥಾ ರೀತಿಯಲ್ಲಿ ನೈಜವಾಗಿ ಹೇಳುತ್ತಾ ಹೋಗುತ್ತಾರೆ... ಇದೇ ಸ್ಥಿತಿಯಲ್ಲಿರುವಾಗಲೇ ಸಂಭಾಷಣೆಯ ಮೂಲಕ ಟ್ರೀಟ್‌ಮೆಂಟ್ ನೀಡುತ್ತೇವೆ..."

"ಅಲ್ಲಿಗೆ ಸರಿಯಾಗ್ತಾಳಲ್ವಾ?" ಆತುರದಿಂದ ಕೇಳಿದ.

"ಓಹೋ... ಖಂಡಿತವಾಗಿ... ಏನೇ ಆಗಿದ್ದರೂ ನಿಮ್ಮ ಹೆಂಡತಿಯನ್ನು ಮೊದಲಿನಂತೆ ಕಳುಹಿಸುವುದು ನಮ್ಮ ಜವಾಬ್ದಾರಿ... ಸರೀನಾ?... ಎಲ್ಲಿ... ಈ ಜಾಗದಲ್ಲಿ ಸೈನ್ ಮಾಡೀಮ್ಮ..."

ನಡುಗುತ್ತಿದ್ದ ಕೈಗಳಿಂದ ಗೀತಾ ತನ್ನ ಹೆಸರನ್ನು ಬರೆದಳು. ಗುಂಡಾಗಿ, ಮುದ್ದಾಗಿ ಬರೆಯುತ್ತಿದ್ದ ತನ್ನ ಹೆಂಡತಿಯ ಅಕ್ಷರಗಳು ಗೀಚಿದಂತೆ ಕಾಣುತ್ತಿದ್ದುದನ್ನು ದಿವಾಕರ ಗಮನಿಸಿದ.

"ಸಿಸ್ಟರ್... ಇವರನ್ನು ಒಳಗಿನ ರೂಮಿಗೆ ಕರ್ಕೊಂಡು ಹೋಗಿ... ಮಲಗಿಸಿ. ಪೆಂಟಾಥಾಲ್ ಸೋಡಿಯಂ ಅನ್ನು ಲೋಡ್ ಮಾಡಿ. ಇನ್ನೇನು ಪ್ರೊಫೆಸರ್ ಬಂದ್ಬಿಡ್ತಾರೆ" ಎನ್ನುತ್ತಾ ಪರೀಕ್ಷಾ